# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಸೇವಾ ಭಾರತಿ, ಸಕ್ಷಮ ಮತ್ತು ರಾಷ್ಟ್ರೋತ್ಥಾನ ರಕ್ತನಿಧಿಯ ವತಿಯಿಂದ ನಡೆದ ರಕ್ತದಾನ ಶಿಬಿರವು ಬೆಂಗಳೂರಿನ ಪೂರ್ಣಪ್ರಜ್ಞಾ ವಿದ್ಯಾಪೀಠದಲ್ಲಿ ನಡೆದಿದ್ದು ಅದನ್ನು ಪೂಜನೀಯ ಪೇಜಾವರ ಶ್ರೀಗಳು ಉದ್ಘಾಟಿಸಿದರು.


ಸಂಪುಟ : 44 | ಸಂಚಿಕೆ : 15 | ಕಾರ್ತಿಕ – ಮಾರ್ಗಶಿರ | ಕಲಿಯುಗಾಬ್ದ 5124 | 15–11–2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಸಂವಿಧಾನ ನಡೆದು ಬಂದ ಹಾದಿ – ಒಂದು ಅವಲೋಕನ

11 ಅಕ್ಟೋಬರ್ 2015 ರಂದು ಮುಂಬೈನ ಹೃದಯ ಭಾಗದಲ್ಲಿ ನಿರ್ಮಿತಗೊಳ್ಳಲಿದ್ದ ಡಾ. ಬಾಬಾ ಸಾಹೇಬ್ ಅಂಬೇಡ್ಕರರ ನಾನೂರ ಇವತ್ತು ಅಡಿ ಪ್ರತಿಮೆ – ಸಮತಾ ಸ್ಮಾರಕದ – ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪ್ರಧಾನಿ ಮೋದಿಯವರು ಅದೇ ವರ್ಷದ ನವೆಂಬರ್ 26 ರನ್ನು 'ಸಂವಿಧಾನ ದಿನಾಚರಣೆ' ಯೆಂದು ಆಚರಿಸಲಾಗುವುದೆಂದು ಘೋಷಿಸಿದ್ದರು. ಅಂದಿನಿಂದ ಪ್ರತಿ ವರ್ಷವೂ ಈ ಅರ್ಥಪೂರ್ಣ ಆಚರಣೆ ನಡೆದು ಬಂದಿದೆ.

ಸಂವಿಧಾನ ರಚನಾ ಸಭೆ ಹೇಗೆ ನಿರ್ಮಿತಗೊಂಡಿತ್ತೆಂಬುದು ಗಮನಾರ್ಹ. ಸಂವಿಧಾನ ರಚನಾ ಸಭೆಯ ಸದಸ್ಯರೆಲ್ಲರೂ ಅಂದಿನ ಪ್ರಾಂತೀಯ ವಿಧಾನಸಭೆಗಳಿಗೆ ಆಯ್ಕೆಗೊಂಡಿದ್ದ ಶಾಸಕರು ಆರಿಸಿ ಕಳುಹಿಸಿದ ಪ್ರತಿನಿಧಿಗಳು.

ಸಂವಿಧಾನ ದಿನಾಚರಣೆ ಸಂದರ್ಭದಲ್ಲಿ ನಮ್ಮ ಭಾವಕೋಶ ಮತ್ತು ಸ್ಮೃತಿಪಟಲವನ್ನು ತುಂಬಬೇಕಾದವರು ಸಂವಿಧಾನದ ಮುಖ್ಯಶಿಲ್ಪಿ ಪೂಜ್ಯರಾದ ಬಾಬಾ ಸಾಹೇಬರು. ಜೊತೆಗೆ, ಸಂವಿಧಾನ ರಚನಾ ಸಭೆಯಲ್ಲಿದ್ದ ಸರ್ದಾರ್ ಪಟೇಲ್, ಬಾಬು ರಾಜೇಂದ್ರ ಪ್ರಸಾದ್, ಏಕೈಕ ದಲಿತ ಮಹಿಳೆ ದಾಕ್ಷಾಯಣಿ ವೇಲಾಯುಧನ್, ಸರೋಜಿನಿ ನಾಯ್ಡು ಮುಂತಾದವರನ್ನು ಶ್ರದ್ಧೆಯಿಂದ ಸ್ಮರಿಸಬೇಕಿದೆ. ಹಾಗೆಯೇ, ಅಂದು ಮೈಸೂರು, ಮುಂಬೈ ಮುಂತಾದ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಕರ್ನಾಟಕವನ್ನು ಪ್ರತಿನಿಧಿಸಿದ್ದ ಕೆಂಗಲ್ ಹನುಮಂತಯ್ಯನವರು, ಚಂಗಲರಾಯ ರೆಡ್ಡಿ, ಟಿ. ಸಿದ್ದಲಿಂಗಯ್ಯ, ಗುರುವರೆಡ್ಡಿ ಎಸ್.ವಿ. ಕೃಷ್ಣಮೂರ್ತಿರಾವ್, ಎಚ್. ಸಿದ್ಧವೀರಪ್ಪ, ಟಿ. ಚನ್ನಯ್ಯ ಮತ್ತು ಎಸ್. ನಿಜಲಿಂಗಪ್ಪನವರನ್ನೂ ಸಹ ಗೌರವಾದರಗಳಿಂದ ಸ್ಮರಿಸಬೇಕಿದೆ.

1946ರಲ್ಲಿ ನಮ್ಮ ದೇಶದ ಪರಿಸ್ಥಿತಿಯನ್ನು ಗಮನಿಸಿ. ಬ್ರಿಟಿಷರ ಒಡೆದಾಳುವ ನೀತಿಯ ಭಾಗವಾಗಿ, 1909ರಲ್ಲಿ ದೇಶದ ಪ್ರಾಂತೀಯ ವಿಧಾನಸಭೆಗಳಲ್ಲಿ ಒಂದಷ್ಟನ್ನು ಮುಸ್ಲಿಂ ಮೀಸಲು ಕ್ಷೇತ್ರಗಳೆಂದು ಘೋಷಿಸಲಾಗಿತ್ತು. 1937ರವರೆಗೂ ಈ ಮುಸ್ಲಿಂ ಕ್ಷೇತ್ರಗಳಲ್ಲಿ ಮುಸ್ಲಿಂ ಲೀಗ್ ಹೀನಾಯವಾಗಿ ಸೋಲುತ್ತಿತ್ತು. ಆದರೆ, 1937ರ ನಂತರದಲ್ಲಿ ದೇಶವನ್ನು ಹೇಗಾದರೂ ವಿಭಜನೆ ಮಾಡಲೇಬೇಕೆಂದು ತೀರ್ಮಾನಿಸಿದ್ದ ಭಾರತದ ಕಮ್ಯುನಿಸ್ಟರು ಮುಸ್ಲಿಂ ಲೀಗಿನೊಳಗೆ ಸೇರಿಕೊಂಡರು. ಅವರಲ್ಲಿ ಪ್ರಮುಖರಾಗಿದ್ದ ಡ್ಯಾನಿಯಲ್ ಲತೀಫಿ ಮುಸ್ಲಿಂ ಲೀಗಿನ ಪ್ರಣಾಳಿಕೆಯನ್ನು ತಯಾರಿಸುವ ಜವಾಬ್ದಾರಿ ಹೊತ್ತರು. ಮುಸ್ಲಿಂ ಲೀಗಿನ ಕೋಮುದ್ವೇಷ ಮತ್ತು ಕಮ್ಯುನಿಸ್ಟರ ನರಿ ಬುದ್ಧಿಯ ಸಮ್ಮಿಶ್ರಣದಿಂದ ಮುಸ್ಲಿಂ ಲೀಗಿನ ಪ್ರಣಾಳಿಕೆ ಮತ್ತು ಚುನಾವಣಾ ಯುದ್ಧತಂತ್ರ ತಯಾರಾದವು. ಹಿಂದೂಗಳ ಮೇಲೆ ನೇರ ದಾಳಿ ನಡೆಸುವ "ಡೈರೆಕ್ಟ್ ಆಕ್ಷನ್ ಡೇ" ಈ ವಿಷಮ ತಂತ್ರದ ಭಾಗವಾಗಿತ್ತು. ದೇಶದ ಅಖಂಡತೆಗೆ ಇಷ್ಟೆಲ್ಲಾ ಹಾನಿಮಾಡಿದ ಈ ಡ್ಯಾನಿಯಲ್ ಲತೀಫಿ, ಮತ್ತಷ್ಟು ಪಾಕಿಸ್ತಾನಗಳನ್ನು ನಿರ್ಮಿಸಲು ಅನುಕೂಲವಾಗಲೆಂದು ಭಾರತದಲ್ಲೇ ಉಳಿದುಕೊಂಡು, ತನ್ನ 87ನೇ ವಯಸ್ಸಿನವರೆಗೂ ಸುಪ್ರೀಂ ಕೋರ್ಟಿನಲ್ಲಿ ವಕಾಲತ್ತು ಮಾಡಿಕೊಂಡಿದ್ದದ್ದು 2000ರಲ್ಲಿ ಸಹಜವಾಗಿ ಸತ್ತುಹೋದದ್ದನ್ನು ಇಲ್ಲಿ ಸ್ಮರಿಸಲೇಬೇಕು. ಪೂಜ್ಯ ಶ್ರೀ ಗುರೂಜಿ, ಸಾವರ್ಕರ್, ಲೋಕನಾಯಕ ಜಯಪ್ರಕಾಶ್ ನಾರಾಯಣ್ ಮುಂತಾದವರನ್ನು ಕಾರಣವಿಲ್ಲದೇ ಬಂಧಿಸಿ ಜೈಲಿಗಟ್ಟಿ ಹಿಂಸಿಸಿದ ನಮ್ಮ ಸರಕಾರಗಳು ಡ್ಯಾನಿಯಲ್ ಲತಿಫಿಯಂಥವರಿಗೆ ಸಕಲ ಸತ್ಕಾರಗಳನ್ನೂ ನೀಡಿದವು. 2000ದಲ್ಲಿ ಈ ಲತೀಫಿ ಸತ್ತಾಗ ಕಮ್ಯುನಿಸ್ಟರ ಮುಖವಾಣಿ ಮತ್ತು ತುತ್ತೂರಿ ಪತ್ರಿಕೆಗಳೂ ಸೇರಿದಂತೆ, ಕಮ್ಯುನಿಸ್ಟರು ಪರೋಕ್ಷವಾಗಿ ನಡೆಸುವ 'ಎಕನಾಮಿಕ್ ಎಂಡ್ ಪೊಲಿಟಿಕಲ್ ವೀಕ್ಲಿ' (EPW) ಪತ್ರಿಕೆಯೂ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದವು.

ಕಮ್ಯುನಿಸ್ಟರ ಕುತಂತ್ರ ಮತ್ತು ಮುಸ್ಲಿಂಲೀಗಿನ ಕೋಮುದ್ವೇಷಗಳ ವಿಷಕಾರಿ ಸಮ್ಮಿಶ್ರಣದಿಂದ 1946ರಲ್ಲಿ ನಡೆದ ಭಾರತದ ಪ್ರಾಂತೀಯ ಚುನಾವಣೆಗಳಲ್ಲಿ (ಇಂದಿನ ವಿಧಾನಸಭಾ ಚುನಾವಣೆಗಳಂತೆ) ಮುಸ್ಲಿಂ ಮೀಸಲು ಕ್ಷೇತ್ರಗಳೆಂದು ಘೋಷಿಸಲಾಗಿದ್ದ 492 ಕ್ಷೇತ್ರಗಳಲ್ಲಿ 409 ಕ್ಷೇತ್ರಗಳನ್ನು ಮುಸ್ಲಿಂ ಲೀಗ್ ಗೆದ್ದುಕೊಂಡಿತ್ತು. ಮುಂಬೈ, ಮದ್ರಾಸ್ ಮತ್ತು ಒರಿಸ್ಸಾ ಪ್ರಾಂತ್ಯದ ಶೇಕಡಾ ನೂರಕ್ಕೆ ನೂರರಷ್ಟು ಕ್ಷೇತ್ರಗಳು ಮುಸ್ಲಿಂ ಲೀಗ್ ಪಾಲಾಗಿದ್ದವು.



THE CONSTITUTION OF INDIA

WE, THE PEOPLE OF INDIA, having solemnly resolved to constitute India into a SOVEREIGN DEMOCRATIC REPUBLIC and to secure to all its citizens:

JUSTICE, social, economic and political;

LIBERTY of thought, expression, belief, faith and worship;

EQUALITY of status and of opportunity;

and to promote among them all

FRATERNITY assuring the dignity of the individual and the unity of the Nation;

IN OUR CONSTITUENT ASSEMBLY this twenty-sixth day of November, 1949, do HEREBY ADOPT, ENACT AND GIVE TO OURSELVES THIS CONSTITUTION.



Signature of the artist Beohar Rammanohar Sinha as 'Ram'
अलंकरणकर्ता व्यौहार राममनोहर सिंहा के संक्षिप्त हस्ताक्षर 'राम'

ಮುಸ್ಲಿಂ ಲೀಗಿನ ಪ್ರಾಬಲ್ಯವಿಲ್ಲದೆಡೆ, ದೇಶವನ್ನು ಛಿದ್ರಗೊಳಿಸುವ ಜವಾಬ್ದಾರಿಯನ್ನು ಸ್ಥಳೀಯ ಮುಸ್ಲಿಂ ರಾಜರು, ನಿಜಾಮರು ಮತ್ತು ಗುಂಡಾಪಡೆಗಳು ವಹಿಸಿಕೊಂಡಿದ್ದವು. ಇಂದಿನ ತೆಲಂಗಾಣ, ಮಹಾರಾಷ್ಟ್ರ ಮತ್ತು ಕರ್ನಾಟಕದ ಅನೇಕ ಜಿಲ್ಲೆಗಳನ್ನು ಒಳಗೊಂಡಿದ್ದ ಅಂದಿನ ಹೈದರಾಬಾದ್ ಪ್ರಾಂತ್ಯದಲ್ಲಿ ನಿಜಾಮನ ದಬ್ಬಾಳಿಕೆ ಮುಗಿಲುಮುಟ್ಟಿತ್ತು. ಇಂದು ಕಾಂಗ್ರೆಸ್ಸಿನ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರ ತಾಯಿ ಮತ್ತು ಅತ್ತೆಯನ್ನು (ತಂದೆಯ ತಂಗಿ) ನಿಜಾಮನ ಗುಂಡಾಪಡೆಯಾದ ರಜಾಕರು ಜೀವಂತವಾಗಿ ಸುಟ್ಟುಹಾಕಿದ್ದರು.

ನಿಜಾಮ ಮತ್ತು ಮುಸ್ಲಿಂ ಲೀಗಿನ ಪ್ರಯತ್ನಗಳಿಗೆ ಸಹಕರಿಸಲು, ಹೈದರಾಬಾದ್ ಪ್ರಾಂತ್ಯದಲ್ಲಿ ಮತ್ತಷ್ಟು ಅಭದ್ರತೆ ಸೃಷ್ಟಿಸಲು ಕಮ್ಯುನಿಸ್ಟರು ಸಶಸ್ತ್ರ ದಂಗೆಯನ್ನು ಹುಟ್ಟು ಹಾಕಿದ್ದರು. ತೆಲಂಗಾಣ ಸಶಸ್ತ್ರ ಹೋರಾಟದ ಉದ್ದೇಶ ಈ ಪ್ರದೇಶವನ್ನು ದೇಶದಿಂದ ವಿಚ್ಛಿದ್ರಗೊಳಿಸುವುದಾಗಿತ್ತು. ಇದೇ ಮಾದರಿಯಲ್ಲಿ ಬಂಗಾಳವನ್ನು ದೇಶದಿಂದ 'ವಿಮುಕ್ತಿ'ಗೊಳಿಸಲು ತೇಭಾಗ ಚಳುವಳಿ ಮತ್ತು ಮಹಾರಾಷ್ಟ್ರದ ಠಾಣೆ ಜಿಲ್ಲೆಯನ್ನು ಬೇರ್ಪಡಿಸಲು ವಾರಳಿ ಸಶಸ್ತ್ರ ಹೋರಾಟವನ್ನು ಸಂಘಟಿಸಿದ್ದರು.

ಇದನ್ನೆಲ್ಲಾ ಸಮಷ್ಟಿಯಾಗಿಟ್ಟುಕೊಂಡು ದೇಶ ಅದೆಂಥಹ ಸಂಕಟಮಯ ಪರಿಸ್ಥಿತಿಯಲ್ಲಿತ್ತೆಂದು ಯೋಚಿಸಿ ನೋಡಿ. ಒಂದು ಕಡೆ ಪಾಕಿಸ್ತಾನಕ್ಕೆ ಇವತ್ತು ಕೋಟಿ ಕೊಡಬೇಕೆಂದು ಸತ್ಯಾಗ್ರಹ. ಅದೇ ದುಡ್ಡಿನಿಂದ ಕಾಶ್ಮೀರದ ಮೇಲೆ ಪಾಕಿಸ್ತಾನದ ದಾಳಿ. ನಾಲ್ಕು ಲಕ್ಷದಷ್ಟಿದ್ದ ರಜಾಕರ ಪಡೆಯಿಂದ ಹಳ್ಳಿ ಹಳ್ಳಿಗಳನ್ನೇ ಸುತ್ತುಹಾಕಿ ಲಕ್ಷಾಂತರ ಹಿಂದುಗಳನ್ನು ಕೊಲ್ಲುತ್ತಿದ್ದ ನಿಜಾಮ; ಹೈದರಾಬಾದ್, ಜುನಾಗಢ, ಗೋವೆ, ಪುದುಚೇರಿ ಸೇರಿದಂತೆ ಇನ್ನೂ ಸ್ವತಂತ್ರವಾಗದಿದ್ದ ದೇಶದ ನಾನಾ ಪ್ರದೇಶಗಳು. ದೇಶವನ್ನು ವಿಚ್ಛಿದ್ರಗೊಳಿಸಲು ಸಂಘಟಿಸಿದ್ದ ಕಮ್ಯುನಿಸ್ಟರ ಸಶಸ್ತ್ರ ದಂಗೆಗಳು. ಇದನ್ನೆಲ್ಲಾ ನಿಭಾಯಿಸುತ್ತಲೇ ಸಂವಿಧಾನ ರಚನೆಯನ್ನೂ ಸಾಧಿಸಬೇಕಿತ್ತು.

ಐನೂರಕ್ಕೂ ಹೆಚ್ಚು ಸಂಸ್ಥಾನಗಳನ್ನು ಒಗ್ಗೂಡಿಸಿ ದೇಶದ ಐಕ್ಯತೆಯನ್ನು ಸಾಧಿಸಿದ ಸರ್ದಾರ್ ವಲ್ಲಭಭಾಯಿ ಪಟೇಲರು ಸಂವಿಧಾನ ರಚನಾ ಸಭೆಯಲ್ಲೂ ಅತ್ಯಂತ ಸಕ್ರಿಯವಾಗಿ ಪಾಲ್ಗೊಂಡಿದ್ದರು ಅನೇಕರ ಗಮನದಲ್ಲಿಲ್ಲ. ದೇಶದ ಐಕ್ಯತೆ ಮತ್ತು ಅಖಂಡತೆಯನ್ನು ಸರ್ವಕಾಲಕ್ಕೂ ಉಳಿಸಿಕೊಳ್ಳಲು ಪೂರಕವಾಗಿ ನಮ್ಮ ಸಂವಿಧಾನ ರೂಪಿತಗೊಳಿಸಲು ಸರ್ದಾರ್ ಪಟೇಲ್ ಅವಿರತವಾಗಿ ಶ್ರಮಿಸಿದರು. 1946ರಲ್ಲಿ ಸಂವಿಧಾನ ರಚನಾ ಪ್ರಕ್ರಿಯೆ ಪ್ರಾರಂಭಗೊಂಡು ದೇಶ ವಿಭಜನೆಯಾಗುವವರೆಗೂ, ಮುಸ್ಲಿಂ ಲೀಗಿನ ಸದಸ್ಯರು ಮತ್ತು ಅವರಿಗೆ ಬೆಂಬಲವಾಗಿದ್ದ ಇತರ ಮುಸ್ಲಿಂ ಸದಸ್ಯರು, ಕಮ್ಯುನಿಸ್ಟರು ಮುಂತಾದವರು, ಸಂವಿಧಾನ ರಚನಾ ಸಭೆಯಲ್ಲಿದ್ದುಕೊಂಡೇ ದೇಶವನ್ನು ವಿಭಜಿಸಲು ಪ್ರಯತ್ನಿಸುತ್ತಿದ್ದಾಗ, ದೇಶವನ್ನು ಕಾಪಾಡಿದ ಶಕ್ತಿ ಸರ್ದಾರ್ ಪಟೇಲರು.

ಪ್ರಪಂಚದ ಬಹುತೇಕ ರಾಷ್ಟ್ರಗಳಿಗೆ ಸಂವಿಧಾನವಿದೆ. ಅಮೆರಿಕದಂಥ ರಾಷ್ಟ್ರಗಳ ಇತಿಹಾಸ ಹೆಚ್ಚುಕಮ್ಮಿ ಪ್ರಾರಂಭವಾಗುವುದೇ ಅವರ ಸಂವಿಧಾನ ರಚನೆಯಿಂದ. ಸಾವಿರಾರು ವರ್ಷಗಳ ಇತಿಹಾಸವಿರುವ ನಮ್ಮ ರಾಷ್ಟ್ರದ ಸಂವಿಧಾನ ತೀರಾ ಇತ್ತೀಚಿನದ್ದು. ನಮ್ಮ ಸಂವಿಧಾನವನ್ನು ಅದರ ರಚನಾ ಪ್ರಕ್ರಿಯೆಯ ಸಂದರ್ಭದ ಜೊತೆಗಿಟ್ಟುಕೊಂಡೇ ಅಧ್ಯಯನ ಮಾಡಬೇಕಿದೆ. 1946ರಿಂದ ಸುಮಾರು ಒಂದೂವರೆ ವರ್ಷಗಳಷ್ಟು ಕಾಲ 87% ಮುಸ್ಲಿಂ ಕ್ಷೇತ್ರಗಳನ್ನು ಗೆದ್ದುಕೊಂಡಿದ್ದ ಪ್ರಾಂತೀಯ ವಿಧಾನ ಸಭೆಗಳಲ್ಲಿದ್ದ ಮುಸ್ಲಿಂಲೀಗಿನ ಪ್ರತಿನಿಧಿಗಳು ಚುನಾಯಿಸಿ ಕಳುಹಿಸಿದ ಪ್ರತಿನಿಧಿಗಳು ನಮ್ಮ ಸಂವಿಧಾನ ರಚನಾ ಸಭೆಯಲ್ಲಿದ್ದರೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಿದೆ.

ಜನವರಿ 1948ರಲ್ಲಿ ಪಟೇಲರಿಗೆ ಹೃದಯಾಘಾತವಾಗಿದ್ದರೂ, ಹೆಗಲ ಮೇಲಿದ್ದ ಯಾವುದೇ ಜವಾಬ್ದಾರಿಯನ್ನು ಕಳಚಿಕೊಳ್ಳಲಿಲ್ಲ. ಕ್ಷೀಣಿಸುತ್ತಿದ್ದ ಅರೋಗ್ಯ, ಪ್ರಾಂತ್ಯಗಳನ್ನು ಒಗ್ಗೂಡಿಸಬೇಕಾದ ತುರ್ತು, ದೇಶದ ಆಂತರಿಕ ಮತ್ತು ಬಾಹ್ಯ ಸಂಕಷ್ಟಗಳು, ಕಮ್ಯುನಿಸ್ಟರ ದಂಗೆಗಳ ನಡುವೆಯೂ, ಸಂವಿಧಾನ ರಚನಾ ಸಭೆಯಲ್ಲಿ ಅತ್ಯಂತ ಸಕ್ರಿಯವಾಗಿ ಪಾಲ್ಗೊಂಡ ಪಟೇಲರ ಸಂಸದೀಯ ಪಟುತ್ವ ಮತ್ತು ಸಂವಿಧಾನ ರಚನೆಯಲ್ಲಿ ಅವರು ವಹಿಸಿದ್ದ ಪ್ರಮುಖ ಪಾತ್ರದ ಬಗ್ಗೆ ಸಮಗ್ರ ಮತ್ತು ಶಾಸ್ತ್ರೀಯ ಸಂಶೋಧನೆ ನಡೆಯಬೇಕಿದೆ.

(ಪ್ರತಿ ವರ್ಷ ನವೆಂಬರ್ 26ರಂದು ಸಂವಿಧಾನ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ನಿಟ್ಟಿನಲ್ಲಿ ವಕೀಲರಾದ ಶ್ರೀಧರ್ ಪ್ರಭು ಅವರು ಸಂವಿಧಾನದ ವಿಕಾಸ ಪ್ರಕ್ರಿಯೆಯ ಕುರಿತು ಲೇಖನ ಬರೆದಿದ್ದಾರೆ.)

■

ಸಂಸ್ಮರಣೆ

# ವಿದ್ವಾನ್ ಬಸವಪ್ಪ ಶಾಸ್ತ್ರಿ

ಮೈಸೂರಿನ ಮಹಾರಾಜರಾದ ಹತ್ತನೆ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ ಅವರ ಆಳ್ವಿಕೆಯ ಕಾಲದಲ್ಲಿ ಪ್ರಪ್ರಥಮವಾಗಿ ಈ ರಾಜ್ಯ ಗೀತೆಯನ್ನು ರಚಿಸಲಾಯಿತು. ಮೈಸೂರು ಅರಸರ ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿ ಅಥವಾ ಗೌರಿಯನ್ನು ಪ್ರಾರ್ಥಿಸುವ ಈ ರಾಜ್ಯಗೀತೆಯನ್ನು ರಚಿಸಿದವರು ಆಸ್ಥಾನ ಸಾಹಿತಿ ವಿದ್ವಾನ್ ಬಸವಪ್ಪ ಶಾಸ್ತ್ರಿ. ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ವಿಶೇಷ ಪ್ರಭುತ್ವ ಪಡೆದ ಪ್ರಕಾಂಡ ಪಂಡಿತರು. ಪ್ರತಿಭಾಸಂಪನ್ನರು. 'ಅಭಿನವಕಾಳಿದಾಸ' ಎಂಬ ಬಿರುದು ಧರಿಸಿ ಖ್ಯಾತರಾದವರು. ಕನ್ನಡದ ಉಡುಗೆ ತೊಟ್ಟ ಸಂಸ್ಕೃತದ ಈ ಗೀತೆ ಮೈಸೂರಿನ ಪ್ರಜಾಕೋಟಿಯ ನಿತ್ಯ ಜೀವನದ ಅವಿಭಾಜ್ಯ ಅಂಗವಾಗಿತ್ತು.

ಬಸವಪ್ಪ ಶಾಸ್ತ್ರಿಯವರು 2ನೇ ಮೇ 1843ರಲ್ಲಿ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು 'ನಾರಸಂದ್ರ' ಗ್ರಾಮದಲ್ಲಿ ಜನಿಸಿದರು. ಇವರು ನಾರಸಂದ್ರದ ರುದ್ರಾಕ್ಷಿಮಠದ ಮುರುಡು ಬಸವಸ್ವಾಮಿಗಳ ಮೊಮ್ಮಕ್ಕಳು. ಮುಮ್ಮಡಿ ಕೃಷ್ಣರಾಜ ಒಡೆಯರ ಸಮ್ಮುಖ ಪುರೋಹಿತರಾದ ಮಹಾದೇವಶಾಸ್ತ್ರಿ ಮತ್ತು ಬಸವಮ್ಮನವರ ಏಕಮಾತ್ರ ಪುತ್ರರು. ಜಗದ್ಗುರು ರೇಣುಕಾಚಾರ್ಯ ಸಂಪ್ರದಾಯಕ್ಕೆ ಸೇರಿದ ವೀರಮಾಹೇಶ್ವರ ವಂಶಸ್ಥರು. ಹುಟ್ಟಿದ್ದು ಶುಭಕೃತುನಾಮ ಸಂವತ್ಸರದ ವೈಶಾಖ ಶುದ್ಧ ಬಿದಿಗೆಯಂದು (ಕ್ರಿ.ಶ. 1843). ಚಿಕ್ಕಂದಿನಲ್ಲಿಯೆ ತಂದೆತಾಯಿಗಳನ್ನು ಕಳೆದುಕೊಂಡ ಇವರ ಮೇಲೆ ಅರಮನೆಯ ರಾಜಕವಿಗಳಾದ ಅಳಿಯ ಲಿಂಗರಾಜರ ಕೃಪಾದೃಷ್ಟಿ ಬಿತ್ತು. ಅನಂತರ ಅರಮನೆಯ ಉದಾರಾಶ್ರಯದಲ್ಲಿ ಬೆಳೆದು ವಿದ್ಯಾವಂತರಾದರು. ಬಸವಪ್ಪ ಶಾಸ್ತ್ರಿಯವರ ತಂದೆಯ ಹೆಸರು ಮಹಾದೇವಶಾಸ್ತ್ರಿ, ಇವರು ಪಂಡಿತರಾಗಿದ್ದರು ಮತ್ತು ಇವರ ತಾಯಿಯವರ ಹೆಸರು ಬಸವಾಂಬಿಕೆ.



ಬಸವಪ್ಪ ಶಾಸ್ತ್ರಿಗಳು ಆಸ್ಥಾನ ಪಂಡಿತರಾಗಿದ್ದ ಗರಳಪುರಿ ಶಾಸ್ತ್ರಿಗಳ ಬಳಿ ಅಭ್ಯಾಸ ಮಾಡಿ ಹಳೆಗನ್ನಡದಲ್ಲೂ, ಸಂಸ್ಕೃತ ಸಾಹಿತ್ಯದಲ್ಲೂ, ಸಂಗೀತ ಮತ್ತು ವೇದಾಂತ ದರ್ಶನದಲ್ಲೂ ಅಪಾರ ಪಾಂಡಿತ್ಯ ಪಡೆದರು.

ಇವರು 18ನೇ ವಯಸ್ಸಿನಲ್ಲಿ 'ಕೃಷ್ಣರಾಜಾಭ್ಯುದಯ' ಎಂಬ ಕಾವ್ಯವನ್ನು ರಚಿಸಿ ಪ್ರಖ್ಯಾತರಾದರು. ಸಂಗೀತದಲ್ಲೂ ಉತ್ತಮ ಜ್ಞಾನವನ್ನು ಗಳಿಸಿಕೊಂಡ ಇವರು ಕಾಳಿದಾಸನ ಪ್ರತಿಭೆಗೆ ಕುಂದಿಲ್ಲದಂತೆ ಸಂಸ್ಕೃತ ಮೂಲದ ಕಾಳಿದಾಸನ ನಾಟಕ 'ಶಾಕುಂತಲ'ವನ್ನು 1883ರಲ್ಲಿ ಮೂಲದ ಸೌಂದರ್ಯ, ಲಾಲಿತ್ಯ, ಓಜಸ್ಸುಗಳಿಗೆ ಚ್ಯುತಿ ಬಾರದಂತೆ ಕನ್ನಡಕ್ಕೆ ಭಾಷಾಂತರಿಸಿದರು. 'ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ಇವರ ಅನೇಕ ನಾಟಕಗಳನ್ನು ರಂಗಭೂಮಿಯ ಮೇಲೆ ಪ್ರದರ್ಶಿಸಿತು. ಈ ಕೃತಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರೀ ಬಸವಪ್ಪ ಶಾಸ್ತ್ರಿಗಳ ಹೆಸರನ್ನು ಚಿರಸ್ಥಾಯಿಯಾಗಿಸಿತು. ಇವರ ವಿದ್ವತ್ ಪ್ರತಿಭೆಗೆ ಅಳಿಯ ಲಿಂಗರಾಜು ಅರಸರ ಪ್ರೋತ್ಸಾಹ ಅಪಾರವಾಗಿತ್ತು.

ಕೃಷ್ಣರಾಜಾಭ್ಯುದಯ ಎಂಬ ಕೃತಿಯನ್ನು ಚಂಪೂವಿನಲ್ಲಿ ರಚಿಸಿ ರಾಜಮನ್ನಣೆಗೆ ಪಾತ್ರರಾಗಿ ಆಸ್ಥಾನಕವಿ ಎನಿಸಿದರು. ಅನಂತರ ದಿವಾನ್ ರಂಗಾಚಾರ್ಯರ ಕಾರುಣ್ಯದಿಂದ ಬಾಲಕರಾಗಿದ್ದ ಚಾಮರಾಜ ಒಡೆಯರಿಗೆ ವಿದ್ಯಾಗುರುಗಳಾದರು. ಅಲ್ಲಿಂದಾಚೆಗೆ ಶಾಸ್ತ್ರಿಗಳ ಅಭ್ಯುದಯದ ಬಾಗಿಲು ತೆರೆಯಿತು. ಮೈಸೂರು ಅರಮನೆಯಲ್ಲಿ ರಾಜಗುರುಗಳು, ಆಸ್ಥಾನ ವಿದ್ವಾಂಸರು, ರಾಜಪುರೋಹಿತರು ಆದರು. ಅಳಿಯ ಲಿಂಗರಾಜರಿಗೂ ದಿವಾನ್ ರಂಗಾಚಾರ್ಯರಿಗೂ ನಾಟಕದ ಗೀಳು ಬಹಳವಿದ್ದುದರಿಂದ, 1882ರಲ್ಲಿ ಸ್ಥಾಪಿತವಾದ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಎಂಬ ಕಂಪನಿಗೆ ಹಲವು ನಾಟಕಗಳನ್ನು ಭಾಷಾಂತರಿಸಿ ಕೊಟ್ಟು ಕನ್ನಡ ರಂಗಭೂಮಿಗೂ ಅಮೂಲ್ಯ ಸೇವೆ ಸಲ್ಲಿಸಿದರು. ಕನ್ನಡದಲ್ಲಿ ಅಭಿನಯ ನಾಟಕಗಳೇ ಇಲ್ಲದಿದ್ದಾಗ ಶಾಸ್ತ್ರಿಗಳು ಕನ್ನಡಿಸಿದ ರತ್ನಾವಳಿ ವಿಕ್ರಮೋರ್ವಶೀಯ, ಉತ್ತರರಾಮಚರಿತ ಮತ್ತು ಚಂಡಕೌಶಿಕ ನಾಟಕಗಳು ರಂಗದ ಮೇಲೆ ಪ್ರದರ್ಶನಗೊಂಡು ಜನರ ಮನ್ನಣೆ ಪಡೆದವು. ಕೇವಲ ಸಂಸ್ಕೃತ ನಾಟಕಗಳನ್ನಲ್ಲದೆ ಇಂಗ್ಲಿಷ್‌ನಿಂದ ಷೇಕ್ಸ್‌ಪಿಯರ್‌ನ ಒಥೆಲೊ ನಾಟಕವನ್ನು ಶೂರಸೇನ ಚರಿತ್ರೆ ಎಂಬ ಹೆಸರಿನಲ್ಲಿ ಕನ್ನಡಿಸಿದ ಕೀರ್ತಿಯೂ ಇವರದೆ.

'ಶಾಕುಂತಲ, ವಿಕ್ರಮೋರ್ವಶೀಯ', 'ರತ್ನಾವಳಿ' ಭವಭೂತಿಯ 'ಉತ್ತರ ರಾಮಚರಿತೆ', 'ಮಾಲತೀ ಮಾಧವ' ಶ್ರೀ ಹರ್ಷನ 'ರತ್ನಾವಳಿ' ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದರು. ಇಂಗ್ಲಿಷ್ ಭಾಷಾ ಜ್ಞಾನ ಇಲ್ಲದಿದ್ದರೂ ಶೇಕ್ಸ್‌ಪಿಯರ್ ಬರೆದಿರುವ ಒಥೆಲೊ ನಾಟಕವನ್ನು ಸಿ.ಸುಬ್ಬರಾವ್ ಎಂಬುವವರಿಂದ ಓದಿಸಿ ತಿಳಿದುಕೊಂಡು ಕನ್ನಡಕ್ಕೆ ಭಾಷಾಂತರಿಸಿ 'ಶೂರಸೇನ ಚರಿತ್ರೆ' ಎಂದು ನಾಮಕರಣ ಮಾಡಿದರು. 'ಶಿವಾಷ್ಟಕಮ್', 'ತ್ರಿಷಷ್ಠಿ ಪುರಾತನಸ್ತವ', 'ಶಾರದಾ ದಂಡಕಮ್', 'ಬಿಲ್ವವೃಕ್ಷ' 'ಪೂಜಾವಿಧಿ', 'ಆರ್ಯ ಶತಕಮ್', 'ಶಿವಭಕ್ತಿ ಸುಧಾತರಂಗಿಣಿ', ಸಂಸ್ಕೃತ ಕೃತಿಗಳನ್ನೂ, 'ದಮಯಂತಿ ಸ್ವಯಂವರ', 'ವಿಕ್ರಮೋರ್ವಶೀಯ', 'ನೀತಿಸಾರ ಸಂಗ್ರಹ', 'ಕೃಷ್ಣರಾಜಾಭ್ಯುದಯ', 'ಸಾವಿತ್ರೀ ಚರಿತ್ರೆ' ಕನ್ನಡ ಕೃತಿಗಳನ್ನು ಸ್ವತಂತ್ರವಾಗಿ ರಚಿಸಿದರು. ಕ್ಷೇಮೇಂದ್ರನ 'ಚಂಡ ಕೌಶಿಕ' ನಾಟಕದ ಭಾಷಾಂತರವನ್ನು ಆರಂಭಿಸಿದ್ದರಾದರೂ ಅದನ್ನು ಪೂರ್ಣಗೊಳಿಸಲಾಗಲಿಲ್ಲ. ಆ ಕೃತಿಯನ್ನು ದೇವಶಿಖಾಮಣಿ ಅಳಸಿಂಗಾಚಾರ್ಯರು ಪೂರ್ಣಗೊಳಿಸಿದರು.

ದಿವಾನ್ ರಂಗಾಚಾರ್ಲುರಂತಹ ಮೇಧಾವಿಗಳಿಂದಲೂ ಮಹಾನ್ ಪಂಡಿತೋತ್ತಮರಿಂದಲೂ, ಅಪಾರ ರಸಿಕ ಸಮೂಹದಿಂದಲೂ ಕೂಡಿದ್ದ ರಾಜಸಭೆಯಲ್ಲಿ 'ಅಭಿನವ ಕಾಳಿದಾಸ' ಎಂಬ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಒಮ್ಮೆ ವಾಯುವಿಹಾರಾರ್ಥವಾಗಿ ಕುದುರೆ ಗಾಡಿಯಲ್ಲಿ ಕುಳಿತು ಹೋಗುತ್ತಿರುವಾಗ 1891ರ ಫೆಬ್ರವರಿ ತಿಂಗಳಲ್ಲಿ ತಮ್ಮ 48ನೇ ವಯಸ್ಸಿನಲ್ಲಿ ಅಪಘಾತಕ್ಕೊಳಗಾಗಿ ಈ ಪಾಂಡಿತ್ಯಪೂರ್ಣ ಪ್ರತಿಭೆ ಇನ್ನಿಲ್ಲವಾಯಿತು.

"ಭಾಷಾಂತರ ರೂಪಾಂತರ ಕಾರ್ಯಗಳು, ಉತ್ತಮ ನಾಟಕ ರಚನೆ, ಶ್ರೇಷ್ಠವಾದ ರಂಗಭೂಮಿ ಪರಂಪರೆಗಳು ಬೆಳೆಯಲು ಬೇಕಾದ ಕೃಷಿ ನಡೆಸಿ, ಅತ್ಯವಶ್ಯವಾಗಿದ್ದ ಸಿದ್ಧತೆ ಮಾಡಿದವರೆನ್ನಬೇಕು. ಈ ಭಾಷಾಂತರ ಯುಗದಲ್ಲಿ ರೂಪ ಕಳೆದ, ಸದಭಿರುಚಿ ತುಂಬಿದ ಒಂದು ಅಪರೂಪದ ಕೃತಿ ಬಸವಪ್ಪ ಶಾಸ್ತ್ರಿಗಳ 'ಕನ್ನಡ ಶಾಕುಂತಲ' ಅಲ್ಲಿವರೆಗೆ ನಡೆದ ಭಾಷಾಂತರ ಕಾರ್ಯದಲ್ಲಿ ಸಂಪೂರ್ಣ ಯಶಸ್ಸು ದೊರೆತದ್ದು ಇದೊಂದು ಕೃತಿಗೇ. ಇವರೆ ಮಾಡಿದ ಇನ್ನುಳಿದ ಹಲವು ಭಾಷಾಂತರ ರೂಪಾಂತರಗಳನ್ನು ಗಮನಿಸಿ ಹೇಳುವುದಾದರೂ, ಎಲ್ಲ ಕೃತಿಗಳ ಪೈಕಿ ಸಂಪೂರ್ಣ ಯಶಸ್ಸು ದೊರೆಕಿಸಿಕೊಂಡ ಕೃತಿಯೂ ಇದೊಂದೆ. ಇವರು ಸಂಸ್ಕೃತ ನಾಟಕಗಳಂತೆ ಇಂಗ್ಲಿಷ್ ನಾಟಕಗಳಿಗೂ ಕನ್ನಡದ ಬಣ್ಣ ಹಚ್ಚಿ ಉಡುಪು ತೊಡಿಸುವ ಪ್ರಯತ್ನ ಮಾಡಿದರು. ಸಂಸ್ಕೃತ ನಾಟಕಕಾರರಲ್ಲಿ ಕಾಳಿದಾಸನ ಕಡೆ ಅವರ ದೃಷ್ಟಿ ಹರಿದಂತೆ ಇಂಗ್ಲಿಷ್ ನಾಟಕಕಾರರಲ್ಲಿ ಷೇಕ್ಸ್‌ಪಿಯರ್ ಕಡೆ ಅವರ ಗಮನ ಸುಳಿದುದು ಆಶ್ಚರ್ಯವೇನಲ್ಲ" -ಹೆಚ್.ಕೆ. ರಾಮಚಂದ್ರಶಾಸ್ತ್ರಿ.

ಬಸವಪ್ಪ ಶಾಸ್ತ್ರಿಗಳು ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ ಅವರ ಆಳ್ವಿಕೆಯಲ್ಲಿ ರಚಿಸಿದ ರಾಜ್ಯಗೀತೆಯನ್ನು ಇಂದಿಗು ಸಹ ಅರಮನೆಯ ಸಂಗೀತ ವಿದ್ವಾಂಸರು ಹಾಡುತ್ತಾರೆ. ಈ ಹಾಡಿನಲ್ಲಿ ಮೈಸೂರು ಕುಲದೇವತೆ ಚಾಮುಂಡೇಶ್ವರಿ ಅಥವ ಗೌರಿಯನ್ನು ಸ್ತುತಿಸುವ ರಾಜ್ಯಗೀತೆಯನ್ನು ಇಂದಿಗು ಪರಂಪರಾಗತವನ್ನಾಗಿ ಇಟ್ಟುಕೊಂಡಿದ್ದಾರೆ. ಅಂದಿನಂತೆಯೆ ಇಂದಿಗು ಆ ಹಾಡನ್ನು ಹಾಡುತ್ತ ಬಸವಪ್ಪ ಶಾಸ್ತ್ರಿಗಳ ಆ ರಾಜ್ಯಗೀತೆಯನ್ನು ಮೈಸೂರಿನ ಜನರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಕನ್ನಡ ನಾಡಿನ ಸಂಸ್ಕೃತಿ, ಭಾಷೆ ಇರುವ ವರೆಗು ಬಸವಪ್ಪ ಶಾಸ್ತ್ರಿಗಳನ್ನು ಜನ ಮರೆಯುವುದಿಲ್ಲ. ಈ ರೀತಿ ಬಸವಪ್ಪ ಶಾಸ್ತ್ರಿಗಳು ಕನ್ನಡದಲ್ಲಿ ಬಹಳ ಪ್ರಾಮುಖ್ಯತೆಯನ್ನು ಹೊಂದಿ ಪ್ರಸಿದ್ಧರಾಗಿದ್ದಾರೆ. ■

## ಎಲ್ಲೋ ಕೇಳಿದ ಕಥೆ

ಹರಿ ಮತ್ತು ಗಿರಿ ಮರಳುಗಾಡಿನಲ್ಲಿ ಸಂಚರಿಸುತ್ತಿದ್ದರು. ಬಾಯಾರಿದ ಇಬ್ಬರಿಗೆ ದೂರದಲ್ಲಿ ಮೃಗಜಲ ಕಾಣಿಸಿತು. ತಾನೆ ಮೊದಲು ಸಾಗಿ ಕುಡಿವೆನೆಂದು ಇಬ್ಬರಲ್ಲೂ ವಾಗ್ವಾದ ನಡೆಯಿತು. ಗಿರಿಯ ಕೆನ್ನೆಗೆ ಒಂದೇಟು ಬಿತ್ತು. ಕೊಟ್ಟ ಹರಿ ಜಯಿಸಿ ಅಲ್ಲಿಂದ ಮುಂದೆ ಹೋದ. ತಿರುಗಿ ನೋಡಿದರೆ ಗಿರಿ ಕುಳಿತು ಮರಳಲ್ಲಿ ಏನೋ ಬರೆಯುತ್ತಿದ್ದ.

ಮತ್ತೆ ಮುಂದೆ ಹೋದಾಗ ಬಸವಳಿದ ಗಿರಿ ನಡೆಯಲಾಗದೆ ಕಲ್ಲು ಎಡವಿ ಬಿದ್ದು ಬಿಟ್ಟ. ಕೂಡಲೇ ಹರಿ ತನ್ನ ಕೈ ನೀಡಿ ಅವನನ್ನೆತ್ತಿ ಉಪಚರಿಸಿದ. ಮತ್ತೆ ತಮ್ಮ ಪಯಣ ಮುಂದುವರಿಸಿದಾಗ ಗಿರಿ ಮತ್ತೆ ಕಲ್ಲಿನ ಮೇಲೆ ಏನೋ ಸಂದೇಶಾಕ್ಷರಗಳನ್ನು ಕೆತ್ತಿದ. ಈಗ ಹರಿಗೆ ಗಿರಿಯ ಈ ನಡೆ ಅಚ್ಚರಿ ಹಾಗೂ ಕುತೂಹಲ ಉಂಟುಮಾಡಿತು. ಈ ಬಗ್ಗೆ ಪ್ರಶ್ನಿಸಿದಾಗ ಅವನ ಉತ್ತರ ಹೀಗಿತ್ತು.

"ಯಾರಾದರೂ ನೋಯಿಸಿದಾಗ ಅದನ್ನು ಮರಳಿನಲ್ಲಿ ಬರೆಯಬೇಕು. ಕ್ಷಮೆ ಎಂಬ ಗಾಳಿ ಬೀಸಿದರೆ ಅಳಿಸಿ ಹೋಗುತ್ತದೆ. ಹಾಗೆಯೇ ಒಳ್ಳೆಯ ಕೆಲಸ ಮಾಡಿದರೆ ಕಲ್ಲಿನಲ್ಲಿ ಕೆತ್ತಬೇಕು. ಯಾರ ಪ್ರಭಾವಕ್ಕೂ ಅಳಿಸಿ ಹೋಗದೆ ನೆನಪಿನಂಗಳದಲ್ಲಿ ಅಚ್ಚೊತ್ತುವಂತೆ" ಎಂದ.

ಒಳ್ಳೆಯದನ್ನ ಮಾತ್ರವೇ ಸದಾ ಮನಸ್ಸಿನಲ್ಲಿ ತೆಗೆದುಕೊಳ್ಳುವುದರಿಂದ, ಕ್ಷಮೆಯಿಂದ ಮನುಷ್ಯ ಔನ್ನತ್ಯಕ್ಕೇರುತ್ತಾನೆ.

## ಕಾಶ್ಮೀರಿ ಪ್ರತ್ಯೇಕತಾವಾದಿ ಶಬೀರ್ ಅಹ್ಮದ್ ಶಾ ಮನೆ ಜಪ್ತಿ ಮಾಡಿದ ಇಡಿ

ಭಯೋತ್ಪಾದನೆಗೆ ಹಣಕಾಸು ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಶ್ಮೀರಿ ಪ್ರತ್ಯೇಕತಾವಾದಿ ನಾಯಕ ಶಬೀರ್ ಅಹ್ಮದ್ ಶಾ ಹೆಸರಿನಲ್ಲಿರುವ ಸ್ಥಿರಾಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇಡಿ) ಜಪ್ತಿ ಮಾಡಿದೆ.

ಕೇಂದ್ರಾಡಳಿತ ಪ್ರದೇಶ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡಿದ ಪ್ರಕರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ತನಿಖೆಯ ಭಾಗವಾಗಿ ಕಾಶ್ಮೀರ ಪ್ರತ್ಯೇಕತಾವಾದಿ ನಾಯಕ ಶಬೀರ್ ಅಹ್ಮದ್ ಶಾನ ಶ್ರೀನಗರದ ಮನೆ ಸೇರಿದಂತೆ ಸ್ಥಿರಾಸ್ತಿಯನ್ನು ಜಪ್ತಿ ಮಾಡಿರುವುದಾಗಿ ಜಾರಿ ನಿರ್ದೇಶನಾಲಯ ಶುಕ್ರವಾರ ಘೋಷಿಸಿದೆ.

21.80 ಲಕ್ಷ ಮೌಲ್ಯದ ಆಸ್ತಿ ಶ್ರೀನಗರದ ಬೋತ್ಶಾ ಕಾಲೋನಿಯಲ್ಲಿದೆ ಎಂದು ಸಂಸ್ಥೆ ತಿಳಿಸಿದೆ. ಕಲ್ಲು ತೂರಾಟ, ಮೆರವಣಿಗೆಗಳು, ಪ್ರತಿಭಟನೆಗಳು, ಬಂದ್‌ಗಳು, ಹರ್ತಾಲ್‌ಗಳು ಮತ್ತು ಇತರ ವಿಧ್ವಂಸಕ ಚಟುವಟಿಕೆಗಳ ಮೂಲಕ ಕಾಶ್ಮೀರ ಕಣಿವೆಯಲ್ಲಿ ಅಶಾಂತಿಯನ್ನು ಹೆಚ್ಚಿಸುವ ಚಟುವಟಿಕೆಗಳಲ್ಲಿ ಈತ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾನೆ ಎಂದು ಇಡಿ ಆರೋಪಿಸಿದೆ.

ಲಷ್ಕರ್-ಎ-ತೊಯ್ಬಾ ಮುಖ್ಯಸ್ಥ ಹಫೀಜ್ ಸಯೀದ್ ಮತ್ತು ಇತರರ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ(ಯುಎಪಿಎ)ಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಈ ಎಫ್‌ಐಆರ್‌ನಲ್ಲಿ ಶಾ ಹೆಸರು ಕೂಡ ಉಲ್ಲೇಖವಾಗಿದ್ದರಿಂದ ಅವನ ವಿರುದ್ಧ ಹಣಕಾಸು ವಂಚನೆ ಪ್ರಕರಣ ದಾಖಲಿಸಲಾಗಿತ್ತು.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ

## ಹಿರಿಯ ಪ್ರಚಾರಕರಾದ ಚಂದ್ರಶೇಖರ ಭಂಡಾರಿಗಳು ಪಂಚಭೂತಗಳಲ್ಲಿ ಲೀನ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕರು, ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಪೂರ್ವ ಸಂಘಟನಾ ಕಾರ್ಯದರ್ಶಿ, ವಿಶ್ವ ಸಂವಾದ ಕೇಂದ್ರದ ಸಂಸ್ಥಾಪಕರು, ಲೇಖಕರು, ಕವಿಗಳಾದ ಚಂದ್ರಶೇಖರ ಭಂಡಾರಿಗಳು (87) ದೈವಾಧೀನರಾಗಿದ್ದು ಬೆಂಗಳೂರಿನ ಕೇಂದ್ರ ಕಾರ್ಯಾಲಯ ಕೇಶವಕೃಪಾದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹರಾದ ಶ್ರೀ ಮುಕುಂದ, ಬೇಲಿ ಮಠದ ಶ್ರೀಗಳು, ಮಾಜಿ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ, ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ರಾಮಚಂದ್ರೇಗೌಡರು, ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ.ರವಿ, ಎಂ.ಕೆ. ಶ್ರೀಧರ್, ದು.ಗು. ಲಕ್ಷ್ಮಣ ಇನ್ನಿತರ ಲೇಖಕರು, ಪತ್ರಕರ್ತರು, ಸಾಹಿತಿಗಳು, ಗಣ್ಯರು ಅಂತಿಮ ದರ್ಶನ ಪಡೆದರು.

ಅಂತಿಮ ದರ್ಶನದ ಬಳಿಕ ಬನಶಂಕರಿಯ ವಿದ್ಯುತ್ ಚಿತಾಗಾರದಲ್ಲಿ ಅಂತಿಮ ಕ್ರಿಯೆಯನ್ನು ನಡೆಸಲಾಗಿದ್ದು ಸಹಸರಕಾರ್ಯವಾಹರಾದ ಶ್ರೀ ಮುಕುಂದ, ಕ್ಷೇತ್ರೀಯ ಸಂಘಚಾಲಕರಾದ ಶ್ರೀ ವಿ. ನಾಗರಾಜ, ಕ್ಷೇತ್ರೀಯ ಕಾರ್ಯವಾಹ ಶ್ರೀ ತಿಪ್ಪೇಸ್ವಾಮಿ, ಕರ್ನಾಟಕದ ದಕ್ಷಿಣ ಪ್ರಾಂತದ ಪ್ರಚಾರಕರಾದ ಶ್ರೀ ಗುರುಪ್ರಸಾದ್, ಉತ್ತರ ಪ್ರಾಂತ ಪ್ರಚಾರಕರಾದ ಶ್ರೀ ನರೇಂದ್ರ ಉಪಸ್ಥಿತರಿದ್ದರು.

## ಆರ್‌ಎಸ್‌ಎಸ್ ಪ್ರಾಂತ ಸಹ ಬೌದ್ಧಿಕ ಪ್ರಮುಖ್ ಶ್ರೀ ದಿನೇಶ್ ಪೈ ಇನ್ನಿಲ್ಲ – ಗಣ್ಯರ ಸಂತಾಪ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಹ ಬೌದ್ಧಿಕ್ ಪ್ರಮುಖರಾದ ಶ್ರೀ ದಿನೇಶ್ ಪೈ ಅವರು ನಿಧನರಾಗಿದ್ದಾರೆ. ಈ ಹಿಂದೆ ಪ್ರಾಂತದ ಬೌದ್ಧಿಕ ಪ್ರಮುಖರಾಗಿಯೂ ಕಾರ್ಯನಿರ್ವಹಿಸಿದ್ದರು. ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಕ್ಷೇತ್ರೀಯ ಸಂಘಚಾಲಕ ವಿ ನಾಗರಾಜ್, ಪ್ರಾಂತ ಸಂಘಚಾಲಕ ಡಾ. ವಾಮನ್ ಶೆಣೈ ಸೇರಿದಂತೆ ಅನೇಕರು ಸಂತಾಪ ವ್ಯಕ್ತಪಡಿಸಿದ್ದಾರೆ.

ಕ್ಷೇತ್ರೀಯ ಕಾರ್ಯವಾಹರಾದ ನಾ. ತಿಪ್ಪೇಸ್ವಾಮಿಯವರು ಸಂತಾಪ ಸೂಚಿಸುತ್ತಾ "ಆತ್ಮೀಯ ದಿನೇಶ್ ಪೈ ಅವರು ಇನ್ನಿಲ್ಲ ಎಂಬ ಸುದ್ದಿ ಕೇಳಿ ಮನಸ್ಸಿಗೆ ಆಘಾತ ಉಂಟು ಮಾಡಿದೆ. ಅನೇಕ ವರ್ಷಗಳಿಂದ ಸಂಘದ ವಿವಿಧ ಜವಾಬ್ದಾರಿಗಳನ್ನು ಹೊತ್ತು ಸಮರ್ಪಕವಾಗಿ ಕಾರ್ಯವನ್ನು ನಿರ್ವಹಿಸಿದರು. ವಿಶೇಷವಾಗಿ ಕೋವಿಡ್ ಸಂದರ್ಭದಲ್ಲಿ ಆನ್‌ಲೈನ್ ಮುಖಾಂತರ ಬೌದ್ಧಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿದರು. ಅವರು ಹೊಸ ಹೊಸ ಯೋಜನೆಗಳನ್ನು ರೂಪಿಸಿ ಕಾರ್ಯದಲ್ಲಿ ನಾವೀನ್ಯತೆ ತರುತ್ತಿದ್ದರು."

"ಇಂತಹ ಒಬ್ಬ ಕಾರ್ಯಕರ್ತನನ್ನು ಆಕಸ್ಮಿಕವಾಗಿ ಕಳೆದುಕೊಂಡಿರುವುದು ಅತ್ಯಂತ ದುಃಖವನ್ನುಂಟು ಮಾಡಿದೆ ಭಗವಂತ ಅವರ ಕುಟುಂಬ ವರ್ಗದವರಿಗೆ ಕಾರ್ಯಕರ್ತರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುವೆ". ಎಂದಿದ್ದಾರೆ.

## ದೇಶದಲ್ಲಿ ಉದ್ದಗಲಕ್ಕೂ ಸಮಾನವಾದ ಜನಸಂಖ್ಯಾ ನೀತಿ ಜಾರಿಯಾಗಬೇಕಿದೆ? ದತ್ತಾತ್ರೇಯ ಹೊಸಬಾಳೆ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆಯವರು ಮಾತನಾಡಿ, "ದೇಶದಲ್ಲಿ ಜನಸಂಖ್ಯಾ ಸ್ಫೋಟ ಆತಂಕಕಾರಿಯಾಗಿದೆ. ಆದ್ದರಿಂದ, ಈ ಸಮಸ್ಯೆಯನ್ನು ಸಮಗ್ರವಾಗಿ ಮತ್ತು ಏಕಾತ್ಮತೆಯಿಂದ ವಿಚಾರ ಮಾಡಿ, ಎಲ್ಲರಿಗೂ ಅನ್ವಯವಾಗುವ ಜನಸಂಖ್ಯಾ ನೀತಿ ಜಾರಿಯಾಗಬೇಕಿದೆ. ಮತಾಂತರದಿಂದ ಹಿಂದೂಗಳ

# ಸಾಲುದ್ದದ ಸುದ್ದಿಗಳು



ಸಂಖ್ಯೆ ದಿನೇದಿನೇ ಕಡಿಮೆಯಾಗುತ್ತಿದೆ. ದೇಶದ ಹಲವೆಡೆ ಮತಾಂತರದ ಷಡ್ಯಂತ್ರ ನಡೆಯುತ್ತಿದೆ. ಅಲ್ಲದೆ ದೇಶದ ಕೆಲವು ಗಡಿ ಪ್ರದೇಶಗಳಲ್ಲಿ ಒಳನುಸುಳುವಿಕೆಯೂ ನಡೆಯುತ್ತಿದೆ. ಜನಸಂಖ್ಯೆಯ ಅಸಮತೋಲನದಿಂದಾಗಿ ಹಲವು ದೇಶಗಳು ಇಬ್ಭಾಗವಾಗಿವೆ. ಭಾರತದ ವಿಭಜನೆಯೂ ಜನಸಂಖ್ಯೆಯಲ್ಲಿನ ಅಸಮತೋಲನದ ಕಾರಣದಿಂದಾಗಿತ್ತು" ಎಂದು ಅವರು ಹೇಳಿದರು.

ಅವರು ಪ್ರಯಾಗರಾಜ್‌ನಲ್ಲಿ ಗೌಹಾನಿಯಾದಲ್ಲಿರುವ ಜೈಪುರಿಯಾ ಶಾಲೆಯ ವಾತ್ಸಲ್ಯ ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಪತ್ರಿಕಾ ಗೋಷ್ಠಿಯಲ್ಲಿ ಅಖಿಲ ಭಾರತೀಯ ಪ್ರಚಾರ ಪ್ರಮುಖರಾದ ಶ್ರೀ ಸುನಿಲ್ ಅಂಬೇಕರ್ ಅವರು ಉಪಸ್ಥಿತರಿದ್ದರು.

"ಸ್ವಾಭಿಮಾನದ ಜಾಗೃತಿಯಿಂದ ಈಶಾನ್ಯ ರಾಜ್ಯಗಳ ಬುಡಕಟ್ಟು ಸಮುದಾಯದ ಜನರಲ್ಲಿಯೂ ಕೂಡ ನಾನೂ ಹಿಂದೂ ಎಂಬ ಭಾವನೆ ಬೆಳೆಯುತ್ತಿದೆ. ಸ್ವಾಭಿಮಾನದ ಜಾಗರಣದಿಂದಾಗಿ ಈಶಾನ್ಯ ರಾಜ್ಯಗಳ ಬುಡಕಟ್ಟು ಸಮುದಾಯದ ಜನರು ಈಗ ಸಂಘಕ್ಕೆ ಸೇರಲು ಬಯಸುತ್ತಿದ್ದಾರೆ. ಮೇಘಾಲಯ ಮತ್ತು ತ್ರಿಪುರಾ ರಾಜ್ಯದ ಬುಡಕಟ್ಟು ಸಮುದಾಯದ ಜನರು ಕೂಡ ಸಂಘದ ಸರಸಂಘಚಾಲಕರನ್ನು ಆಹ್ವಾನಿಸಲು ಪ್ರಾರಂಭಿಸಿದ್ದಾರೆ" ಎಂದರು.

**2024ರ ವೇಳೆಗೆ, ದೇಶದ ಎಲ್ಲಾ ಭಾಗಗಳೂ ಶಾಖಾಯುಕ್ತವಾಗಲಿದೆ.**

"2024ರ ಅಂತ್ಯದ ವೇಳೆಗೆ, ಭಾರತದ ಎಲ್ಲಾ ಭಾಗಗಳಲ್ಲಿ ಶಾಖೆಯನ್ನು ತಲುಪಲು ಯೋಜನೆಯನ್ನು ಮಾಡಲಾಗಿದೆ. ಕೆಲವು ಪ್ರಾಂತ್ಯಗಳಲ್ಲಿ, ಆಯ್ದ ಮಂಡಲಗಳಲ್ಲಿ ಈ ಕೆಲಸವು 99 ಪ್ರತಿಶತದವರೆಗೆ ಪೂರ್ಣಗೊಂಡಿದೆ. ಚಿತ್ತೋರ್, ಬ್ರಜ್ ಮತ್ತು ಕೇರಳ ಪ್ರಾಂತ್ಯಗಳಲ್ಲಿ ಮಂಡಲ ಮಟ್ಟದವರೆಗೆ ಶಾಖೆಗಳನ್ನು ತೆರೆಯಲಾಗಿದೆ. ಈ ಹಿಂದೆ ದೇಶದಲ್ಲಿ 54,382 ಸಂಘದ ಶಾಖೆಗಳಿದ್ದು, ಈಗ ದೇಶದಲ್ಲಿ 61,045 ಶಾಖೆಗಳನ್ನು ಮಾಡಲಾಗಿದೆ. ಕಳೆದ ಒಂದು ವರ್ಷದಲ್ಲಿ ಸಾಪ್ತಾಹಿಕ ಮಿಲನ್‌ಗಳಲ್ಲಿ 4000 ಮತ್ತು ಮಾಸಿಕ ಮಿಲನ್‌ನಲ್ಲಿ 1,800 ಶಾಖೆಗಳು ಹೆಚ್ಚಳವಾಗಿದೆ" ಎಂದು ಸರಕಾರ್ಯವಾಹರಾದ ದತ್ತಾತ್ರೇಯ ಹೊಸಬಾಳೆಯವರು ಹೇಳಿದರು.

**ದೇಶದಾದ್ಯಂತ ಮೂರು ಸಾವಿರ ಶತಮಾನೋತ್ಸವ ವಿಸ್ತಾರಕ್**

ಅವರು ಮುಂದುವರೆದು ಮಾತನಾಡುತ್ತಾ "2025ರಲ್ಲಿ ಸಂಘವನ್ನು ಸ್ಥಾಪಿಸಿ 100 ವರ್ಷಗಳು ಪೂರ್ಣಗೊಳ್ಳುತ್ತಿವೆ. ಈ ಉದ್ದೇಶಕ್ಕಾಗಿ ಮೂರು ಸಾವಿರ ಯುವಕರು ಶತದಿನೋತ್ಸವ ವಿಸ್ತಾರಕರಾಗಿ ದೇಶಾದ್ಯಂತ ಸಂಘ ಕಾರ್ಯಕ್ಕೆ ಸಮಯ ನೀಡುತ್ತಿದ್ದಾರೆ. ಇನ್ನೂ ಒಂದು ಸಾವಿರ ಮಂದಿ ಯುವಕರು ವಿಸ್ತಾರಕರಾಗಿ ಸಮಯ ನೀಡಲಿದ್ದಾರೆ."

"ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಸಾಮಾಜಿಕ ವಿಷಯಗಳ ಬಗ್ಗೆಯೂ ಚರ್ಚೆ ನಡೆಸಲಾಗಿದ್ದು, ಸಂಗಮ ನಗರ ಪ್ರಯಾಗರಾಜ್‌ನಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿಣಿ ಮಂಡಳಿ ಬೈಠಕ್‌ನಲ್ಲಿ ಜನಸಂಖ್ಯೆಯ ಅಸಮತೋಲನ, ಮಹಿಳೆಯರ ಸಹಭಾಗಿತ್ವ, ಮತಾಂತರ, ಆರ್ಥಿಕ ಸ್ವಾವಲಂಬನೆಯಂತಹ ಪ್ರಮುಖ ಸಾಮಾಜಿಕ ವಿಷಯಗಳ ಕುರಿತು ವಿಸ್ತೃತವಾಗಿ ಚರ್ಚಿಸಿ, ಆ ನಿಟ್ಟಿನಲ್ಲಿ ಕಾರ್ಯ ವಿಸ್ತರಣೆಗೆ ವಿಸ್ತೃತವಾದ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ" ಎಂದು ದತ್ತಾತ್ರೇಯ ಹೊಸಬಾಳೆ ತಿಳಿಸಿದರು.

ಜನಸಂಖ್ಯೆಯ ಅಸಮತೋಲನಕ್ಕೆ ಸಂಬಂಧಿಸಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, "ಕಳೆದ 40–50 ವರ್ಷಗಳಿಂದ ಜನಸಂಖ್ಯೆ ನಿಯಂತ್ರಣಕ್ಕೆ ಒತ್ತು ನೀಡಿದ್ದರಿಂದ ಪ್ರತಿ ಕುಟುಂಬದ ಸರಾಸರಿ ಜನಸಂಖ್ಯೆಯು 3.4 ರಿಂದ 1.9ಕ್ಕೆ ಇಳಿದಿದೆ. ಇದರಿಂದಾಗಿ ಭಾರತದಲ್ಲಿ ಯುವಜನರ ಸಂಖ್ಯೆ ಕಡಿಮೆಯಾಗಿ ವೃದ್ಧರ ಸಂಖ್ಯೆ ಹೆಚ್ಚಾಗುವ ಕಾಲ ಬರಲಿದೆ ಎಂಬುದು ಆತಂಕಕಾರಿ ಸಂಗತಿ. ದೇಶವನ್ನು ಯುವ ದೇಶವನ್ನಾಗಿಡಲು, ಜನಸಂಖ್ಯೆಯನ್ನು ಸಮತೋಲನದಲ್ಲಿಡಲು ಒತ್ತು ನೀಡಬೇಕಿದೆ. ಅಲ್ಲದೆ ಅದರ ಜೊತೆಗೆ ಮತಾಂತರ ಮತ್ತು ಗಡಿಯ ಮೂಲಕ ಒಳನುಸುಳುವಿಕೆಯಿಂದ ದುಷ್ಚಕ್ರದಿಂದ ಉಂಟಾಗುವ ಜನಸಂಖ್ಯೆಯ ಅಸಮತೋಲನವು ಕಳವಳಕಾರಿ" ಎಂದರು.

ಪ್ರಯಾಗರಾಜ್‌ನ ಜಿಲ್ಲಾ ಕೇಂದ್ರದಿಂದ ಸುಮಾರು 25 ಕಿ.ಮೀ ದೂರದಲ್ಲಿರುವ ಗೌಹಾನಿಯಾ, ಯಮುನಾರ್‌ಪಲ್ಲಿರುವ ವಾತ್ಸಲ್ಯ ವಿದ್ಯಾಲಯದ ಆವರಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತ ಕಾರ್ಯಕಾರಿ ಮಂಡಳಿ ಸಭೆ ನಡೆಯಿತು. ಸರಸಂಘಚಾಲಕರಾದ ಡಾ. ಮೋಹನ್ ಭಾಗವತ್, ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆ ಅವರು ಭಾನುವಾರ ಭಾರತ ಮಾತೆಯ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಭೆಗೆ ಚಾಲನೆ ನೀಡಿದ್ದರು. ಅಕ್ಟೋಬರ್ 19ರ ಬುಧವಾರದಂದು ಈ ಬೈಠಕ್ ಮುಕ್ತಾಯಗೊಂಡಿದೆ.

## ಸುಬ್ರಹ್ಮಣ್ಯದ ಸಾಮರಸ್ಯ ವಿಭಾಗದ ವತಿಯಿಂದ 'ತುಡರ್' ಕಾರ್ಯಕ್ರಮ

ಸಾವಿರಾರು ವರ್ಷಗಳಿಂದ ಹಿಂದೂ ಸಮಾಜದಲ್ಲಿ ಅಂಟಿದ ಮೇಲು–ಕೀಳುಗಳೆಂಬ ತಾರತಮ್ಯವನ್ನು ತೊಳೆದುಹಾಕುವ ನಿಟ್ಟಿನಲ್ಲಿ ಮಂಗಳೂರು ವಿಭಾಗದಾದ್ಯಂತ ತುಡರ್ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು.



ಅದೇ ರೀತಿಯಲ್ಲಿ ಸುಬ್ರಹ್ಮಣ್ಯದ 'ಸಾಮರಸ್ಯ'ದ ತಂಡ ಕಳೆದ ಬಾರಿಯಂತೆ ಈ ಬಾರಿಯೂ ಕಾರ್ಯಕ್ರಮದ ಯೋಜನೆ ಹಾಕಿತ್ತು. ಈ ಬಾರಿ ಸುಬ್ರಹ್ಮಣ್ಯದ ವಾಲಗದಕೇರಿಯಲ್ಲಿ ಮಾಡುವಂತೆ ಯೋಜನೆ ರೂಪಿಸಲಾಗಿತ್ತು. ಅದರಂತೆ ಆ ಭಾಗದ ಸಮಾಜದ ಪ್ರಮುಖರ ಜೊತೆ ಚರ್ಚೆ ಮಾಡಿದಾಗ ಕಾರ್ಯಕ್ರಮಕ್ಕೆ ನಗುಮುಖದಲ್ಲಿಯೇ ಕಾರ್ಯಕ್ರಮ ಮಾಡುವುದಕ್ಕೆ ಸ್ವಾಗತ ನೀಡಿದರು. ಈ ಬಾರಿಯ ಕಾರ್ಯಕ್ರಮಕ್ಕೆ ಚಿತ್ರದುರ್ಗದ ಸಂತರಾದ ಮಾದಾರ ಚೆನ್ನಯ್ಯ ಸ್ವಾಮಿಗಳು ಸುಬ್ರಹ್ಮಣ್ಯಕ್ಕೆ ಮೂರು ದಿನ ಮುಂಚಿತವಾಗಿ ಆಗಮಿಸಿ ಕುಕ್ಕೆಯಲ್ಲಿ ಸರ್ಪಸಂಸ್ಕಾರ ಇನ್ನಿತರ ಧಾರ್ಮಿಕ ಕಾರ್ಯಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡದಲ್ಲದೆ ಸುಬ್ರಹ್ಮಣ್ಯದ ಒಟ್ಟು ವಾತಾವರಣಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಜೆ 5 ಗಂಟೆಗೆ ಮಂಗಳಾರತಿ ನೆರವೇರಿದ ನಂತರ ಗರ್ಭಗುಡಿ ಮಂಗಳಾರತಿಯನ್ನು ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೆಯ ಪರಿವಾರದ ಪ್ರಮುಖರು, ಉಪೇಕ್ಷಿತ ಬಂಧುಗಳ ಗುರಿಕ್ಕಾರ್ ಅವರ ಸಮ್ಮುಖದಲ್ಲಿ ದೀಪ ಉರಿಸಿ ನಂತರ ಚೆಂಡೆ ವಾದ್ಯಘೋಷಗಳ ಜೊತೆ ಪುಟಾಣಿ ಮಕ್ಕಳು ತಮ್ಮ ಸೈಕಲ್ಲಿಗೆ ಧ್ವಜ ಶೃಂಗಾರಗಳನ್ನು ಮಾಡಿ ಸೈಕಲ್‌ನಲ್ಲಿ ಸಾಮರಸ್ಯದ ಸಂದೇಶಗಳನ್ನು ಪ್ರದರ್ಶಿಸುತ್ತ ಮೆರವಣಿಗೆಯು ವಾಲಗದಕೇರಿಯು ತಲುಪಿತು. ವಾಲಗದಕೇರಿಯ ಸುಮಾರು 18 ಮನೆಗಳಿಗೆ ಭೇಟಿಕೊಟ್ಟು, ಪ್ರತಿ ಮನೆಯ ದೇವರಕೋಣೆಯಲ್ಲಿ ಸ್ವತಃ ಸ್ವಾಮಿಗಳೇ ದೀಪ ಹಚ್ಚಿದರು. ಪ್ರತಿ ಮನೆಯವರಿಗೂ ಹಬ್ಬದ ಪ್ರಯುಕ್ತ ಹೊಸ ಬಟ್ಟೆಗಳನ್ನು ನೀಡಲಾಯಿತು. 18 ಮನೆಗಳ ಭೇಟಿಯ ನಂತರ ಗೋ ಪೂಜೆ ನೆರವೇರಿತು. ಸಭಾಕಾರ್ಯಕ್ರಮದ ಮುಂಚಿತವಾಗಿ ಕಂಗಿಲು ಜಾನಪದ ನೃತ್ಯ ಪ್ರದರ್ಶನ ಮಾಡುವ ಮೂಲಕ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ನೀಡಲಾಯಿತು. ಸಾಮರಸ್ಯದ ಸಂದೇಶ ಸಾರುವ ವೈಯಕ್ತಿಕ ಗೀತೆಯ ನಂತರ ಸ್ವಾಮೀಜಿಯವರು ಮಾತನಾಡಿ, "ಸಮಾಜದಲ್ಲಿ ಅಸ್ಪೃಶ್ಯತೆ, ಮಡಿ, ಮೈಲಿಗೆ, ಜಾತಿ, ವರ್ಣ ಭೇದಗಳನ್ನು ಬಿಟ್ಟು ನಾವೆಲ್ಲ ಒಂದು ಸಮಾಜವಾಗಿ ಬದುಕೋಣ", ಎಂದು ಕಾರ್ಯಕ್ರಮದಲ್ಲಿ ಸಾಮರಸ್ಯಕ್ಕೆ ಬೇಕಾದ ಮುಖ್ಯವಾದ ತೆರೆದ ಮನಸ್ಸುಗಳು ಯಾವುದು ಅನ್ನುವುದರ ಕುರಿತಾಗಿ ಸವಿಸ್ತಾರವಾಗಿ ವಿವರಿಸಿದರು. ಸಭಾ ಕಾರ್ಯಕ್ರಮದ ನಂತರ ಕುಟುಂಬಗಳು ಜೊತೆ ಕುಳಿತು ಸಹಭೋಜನ ಮಾಡಲಾಯಿತು.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th NOVEMBER 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-11-2022



## ಜನ ಗಣ ಮನ, ವಂದೇ ಮಾತರಂಗೆ ಸಮಾನ ಸ್ಥಾನವಿದೆ: ಕೇಂದ್ರ

'ಜನ ಗಣ ಮನ'ದೊಂದಿಗೆ 'ವಂದೇ ಮಾತರಂ'ಗೂ ಸಮಾನ ಸ್ಥಾನಮಾನ ನೀಡಬೇಕು ಎಂಬ ಮನವಿಗೆ ಪ್ರತಿಕ್ರಿಯಿಸಿರುವ ಕೇಂದ್ರವು, ಎರಡೂ ಒಂದೇ ಮಟ್ಟದಲ್ಲಿ ನಿಂತಿದ್ದು, ದೇಶದ ಪ್ರತಿಯೊಬ್ಬ ಪ್ರಜೆಯೂ ಎರಡಕ್ಕೂ ಸಮಾನ ಗೌರವ ನೀಡಬೇಕು ಎಂದು ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.




"ಭಾರತದ ಜನರ ಭಾವನೆಗಳು ಮತ್ತು ಮನಸ್ಸಿನಲ್ಲಿ ರಾಷ್ಟ್ರೀಯ ಗೀತೆ ಮತ್ತು ರಾಷ್ಟ್ರೀಯ ಹಾಡು ವಿಶಿಷ್ಟ ಮತ್ತು ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ" ಎಂದು ದೆಹಲಿ ಹೈಕೋರ್ಟ್‌ಗೆ ಕೇಂದ್ರ ಗೃಹ ಸಚಿವಾಲಯ ಪ್ರತಿಕ್ರಿಯೆ ನೀಡಿದೆ.

ಜನವರಿ 24, 1950 ರಂದು ಭಾರತದ ಸಂವಿಧಾನ ಸಭೆಯ ಅಧ್ಯಕ್ಷರು 'ಜನ ಗಣ ಮನ' ಅನ್ನು ಭಾರತದ ರಾಷ್ಟ್ರಗೀತೆಯಾಗಿ ಅಳವಡಿಸಿಕೊಂಡರು. ರಾಷ್ಟ್ರಗೀತೆಯನ್ನು ನುಡಿಸುವ ಅಥವಾ ಹಾಡಬೇಕಾದ ವಿಧಾನ ಮತ್ತು ಸಂದರ್ಭಗಳಿಗೆ ಸಂಬಂಧಿಸಿದಂತೆ 'ಭಾರತದ ರಾಷ್ಟ್ರಗೀತೆಗೆ ಸಂಬಂಧಿಸಿದ ಆದೇಶಗಳನ್ನು' ಹೊರಡಿಸಲಾಗಿದೆ.

1971ರಲ್ಲಿ, ರಾಷ್ಟ್ರಗೀತೆಯನ್ನು ಹಾಡುವುದನ್ನು ತಡೆಯುವ ಅಥವಾ ಅಂತಹ ಗಾಯನದಲ್ಲಿ ತೊಡಗಿರುವ ಯಾವುದೇ ಸಭೆಗೆ ಅಡ್ಡಿಪಡಿಸುವ ಕ್ರಮವನ್ನು ರಾಷ್ಟ್ರೀಯ ಗೌರವಕ್ಕೆ ಅವಮಾನಗಳ ತಡೆಗಟ್ಟುವಿಕೆ ಕಾಯಿದೆ, 1971ರ ಮೂಲಕ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಲಾಯಿತು.

ಬಿಜೆಪಿ ನಾಯಕ ಮತ್ತು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ರಾಷ್ಟ್ರೀಯ ಹಾಡು ಮತ್ತು ರಾಷ್ಟ್ರಗೀತೆಯ ನಡುವಿನ ಸಮಾನತೆ ಮತ್ತು ರಾಷ್ಟ್ರೀಯ ಹಾಡು 'ವಂದೇ ಮಾತರಂ'ಗೆ ಭಾರತದ ರಾಷ್ಟ್ರಗೀತೆಗೆ ಸಮನಾದ ಸ್ಥಾನಮಾನ ಅದೇ ಗೌರವವನ್ನು ನೀಡುವ ಮಾರ್ಗಸೂಚಿಗಳನ್ನು ರೂಪಿಸುವಂತೆ ಕೋರಿ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಮೇಲೆ ಕೇಂದ್ರದ ಪ್ರತಿಕ್ರಿಯೆ ಬಂದಿದೆ.

ಆದರೆ, "ರಾಷ್ಟ್ರೀಯ ಹಾಡು 'ವಂದೇ ಮಾತರಂ' ವಿಷಯದಲ್ಲಿ ಸರ್ಕಾರವು ದಂಡದ ನಿಬಂಧನೆಗಳನ್ನು ಮಾಡಿಲ್ಲ ಮತ್ತು ಅದನ್ನು ಯಾವ ಸಂದರ್ಭಗಳಲ್ಲಿ ಹಾಡಬಹುದು ಅಥವಾ ನುಡಿಸಬಹುದು ಎಂಬ ಬಗ್ಗೆ ಯಾವುದೇ ಸೂಚನೆಗಳನ್ನು ನೀಡಿಲ್ಲ" ಎಂದು ಕೇಂದ್ರ ಸ್ಪಷ್ಟಪಡಿಸಿದೆ.

## ಗುಜರಾತ್ ಚುನಾವಣೆಯಲ್ಲಿ ಮೊದಲ ಬಾರಿಗೆ ಮತ ಚಲಾಯಿಸಲಿದ್ದಾರೆ ಪಾಕ್ ಹಿಂದೂ ನಿರಾಶ್ರಿತರು

ಕಳೆದ 5 ವರ್ಷಗಳಲ್ಲಿ ಪೌರತ್ವ ಪಡೆದ ಸಾವಿರಾರು ಪಾಕಿಸ್ಥಾನಿ ಹಿಂದೂ ನಿರಾಶ್ರಿತರು ಈ ಬಾರಿ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಮತದಾನ ಮಾಡಲಿದ್ದಾರೆ. ಇದು ಗುಜರಾತ್ ಚುನಾವಣಾ ಫಲಿತಾಂಶಗಳ ಮೇಲೆ ಅವರ ಮತಗಳ ಪ್ರಭಾವದ ಬಗ್ಗೆ ಚರ್ಚೆಗಳನ್ನು ಹುಟ್ಟುಹಾಕಿದೆ.

ಮಾಧ್ಯಮ ವರದಿಗಳ ಪ್ರಕಾರ, ಅಹಮದಾಬಾದ್ ಕಲೆಕ್ಟರ್ ಕಚೇರಿಯು 2016 ರಿಂದ ಪಾಕಿಸ್ಥಾನದಿಂದ ಬಂದ 1032 ಹಿಂದೂಗಳಿಗೆ ಭಾರತೀಯ ಪೌರತ್ವವನ್ನು ನೀಡಿದೆ. ಪಾಕಿಸ್ಥಾನದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳು ನಿರಂತರ ಕಿರುಕುಳವನ್ನು ಎದುರಿಸಿ ಭಾರತಕ್ಕೆ ಓಡಿ ಬಂದು ಆಶ್ರಯ ಪಡೆದಿದ್ದಾರೆ.

ಪಾಕಿಸ್ಥಾನ, ಅಫ್ಘಾನಿಸ್ಥಾನ ಮತ್ತು ಬಾಂಗ್ಲಾದೇಶದಿಂದ ಬಂದಿರುವ ಹಿಂದೂಗಳು, ಸಿಖ್ಖರು, ಕ್ರಿಶ್ಚಿಯನ್ನರು ಮತ್ತು ಪಾರ್ಸಿಗಳಿಗೆ ಭಾರತೀಯ ಪೌರತ್ವ ದಾಖಲೆಗಳನ್ನು ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿ ಕಚೇರಿ ಹೊಂದಿದೆ. ಕೇಂದ್ರ ಮತ್ತು ರಾಜ್ಯ ಗುಪ್ತಚರ ಇಲಾಖೆ ಒಪ್ಪಿಗೆ ನೀಡಿದರೆ ಮಾತ್ರ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

ಆಗಸ್ಟ್‌ನಲ್ಲಿ ರಾಜ್ಯ ಗೃಹ ಸಚಿವ ಹರ್ಷ ಸಂಘವಿ ಅವರು ಪಾಕಿಸ್ಥಾನದಿಂದ ಬಂದ 40 ಹಿಂದೂ ನಿರಾಶ್ರಿತರಿಗೆ ಭಾರತೀಯ ಪೌರತ್ವದ ಪ್ರಮಾಣಪತ್ರಗಳನ್ನು ನೀಡಿದ್ದಾರೆ.



ನಿರಾಶ್ರಿತರಲ್ಲಿ ಒಬ್ಬರಾದ ದಿಲೀಪ್ ಮಹೇಶ್ವರಿ ಎಂಬುವವರು ಮಾತನಾಡಿ, "ಭಾರತದಲ್ಲಿ ಮೊದಲ ಬಾರಿಗೆ ಮತ ಚಲಾಯಿಸಲು ಮತ್ತು ಗುಜರಾತ್‌ನಲ್ಲಿ ಹೊಸ ಸರ್ಕಾರವನ್ನು ಆಯ್ಕೆ ಮಾಡಲು ನನಗೆ ಸಂತೋಷವಾಗುತ್ತಿದೆ ಎಂದು ಹೇಳಿದ್ದಾರೆ".

ಗುಜರಾತಿನ 89 ವಿಧಾನಸಭಾ ಸ್ಥಾನಗಳಿಗೆ ಡಿಸೆಂಬರ್ 1 ರಂದು ಮತ್ತು 93 ಸ್ಥಾನಗಳಿಗೆ ಡಿಸೆಂಬರ್ 5 ರಂದು ಮತದಾನ ನಡೆಯಲಿದ್ದು, ಡಿಸೆಂಬರ್ 8 ರಂದು ಗುಜರಾತ್ ಹಾಗೂ ಹಿಮಾಚಲ ಪ್ರದೇಶದ ಮತ ಎಣಿಕೆ ನಡೆಯಲಿದೆ. ಇದಕ್ಕಾಗಿ ವಿವಿಧ ರಾಜಕೀಯ ಪಕ್ಷಗಳು ತೀವ್ರ ಸಿದ್ಧತೆ ನಡೆಸಿವೆ.

## ಹಿಂದೂ ಮಹಾಸಾಗರದಲ್ಲಿ ಚೀನಿ ಹಡಗು: ಹದ್ದಿನ ಕಣ್ಣಿಟ್ಟ ಭಾರತೀಯ ನೌಕಾಪಡೆ

ಚೀನಾದ ಸಂಶೋಧನಾ ನೌಕೆ ಹಿಂದೂ ಮಹಾಸಾಗರ ಪ್ರದೇಶಕ್ಕೆ ಪ್ರವೇಶಿಸಿದ ಹಿನ್ನೆಲೆಯಲ್ಲಿ ಭಾರತೀಯ ನೌಕಾಪಡೆ ಅಲರ್ಟ್ ಆಗಿದೆ.

"ಭಾರತೀಯ ನೌಕಾಪಡೆಯು ಚೀನಾದ ಸಂಶೋಧನಾ ನೌಕೆ ಹಿಂದೂ ಮಹಾಸಾಗರಕ್ಕೆ ಪ್ರವೇಶಿಸಿದ ತಕ್ಷಣ ಅದನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುತ್ತಿದೆ. ಹಿಂದೂ ಮಹಾಸಾಗರದಲ್ಲಿ ನಿಯೋಜಿಸಲಾದ ಮಿಷನ್ ಮತ್ತು ವೈಮಾನಿಕ ಕಣ್ಗಾವಲು ಸಾಮರ್ಥ್ಯದ ಭಾರತೀಯ ನೌಕಾಪಡೆಯು ಈ ಪ್ರದೇಶದಲ್ಲಿ ಸಮಗ್ರ ಕಡಲ ಡೊಮೇನ್ ಅನ್ನು ಕಾವಲು ಕಾಯುತ್ತಿವೆ" ಎಂದು ರಕ್ಷಣಾ ಮೂಲಗಳು ತಿಳಿಸಿವೆ.



ಭಾರತೀಯ ನೌಕಾಪಡೆಯು ತನ್ನ ವೈಮಾನಿಕ ಮತ್ತು ಕಡಲ ಆಸ್ತಿಗಳ ಮೂಲಕ ಚೀನಾದ ಕಣ್ಗಾವಲು ಹಡಗಿನ ಚಟುವಟಿಕೆಯನ್ನು ಮೇಲ್ವಿಚಾರಣೆ ಮಾಡುತ್ತಿವೆ.

ಭಾರತೀಯ ನೌಕಾಪಡೆಯು ತನ್ನ ವೈಮಾನಿಕ ಮತ್ತು ಕಡಲ ಆಸ್ತಿಗಳ ಮೂಲಕ ತನ್ನ ಜವಾಬ್ದಾರಿಯಲ್ಲಿರುವ ಪ್ರದೇಶದಲ್ಲಿ ಯಾವುದೇ ಚಟುವಟಿಕೆಯ ಮೇಲೆ ಕಣ್ಣಿಡುತ್ತದೆ ಎಂದು ಮೂಲಗಳು ತಿಳಿಸಿವೆ.

ಚೀನಾದ ಸಂಶೋಧನಾ ನೌಕೆ ಇನ್ನೂ ಭಾರತೀಯ ಸಮುದ್ರದಿಂದ ಸಾಕಷ್ಟು ದೂರದಲ್ಲಿದೆ. ಭಾರತದ ರಕ್ಷಣಾ ವಲಯವು ತನ್ನ ಕ್ಷಿಪಣಿಗಳನ್ನು ಪರೀಕ್ಷಿಸುವ ಸಮಯದಲ್ಲೇ ಅದರ ಉಪಸ್ಥಿತಿಯು ಕಂಡು ಬಂದಿದೆ ಎಂಬುದು ಗಮನಾರ್ಹ ಸಂಗತಿ.

ಸಾಮಾನ್ಯವಾಗಿ ಸಂಶೋಧನಾ ಹಡಗುಗಳನ್ನು ಚೀನಿಯರು ತಮ್ಮ ಉಪಗ್ರಹ ಉಡಾವಣೆಗಳನ್ನು ಅನುಸರಿಸಲು ಕಳುಹಿಸುತ್ತಾರೆ. ಆದರೆ ಪ್ರಸ್ತುತ ಭಾರತದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಮುಂಬರುವ ಕ್ಷಿಪಣಿ ಉಡಾವಣೆಗಳನ್ನು ಪತ್ತೆಹಚ್ಚಲು ಈ ಹಡಗನ್ನು ಕಳುಹಿಸಿರಬಹುದು ಎಂಬ ಅನುಮಾನಗಳಿವೆ.

## 'ಇನ್ವೆಸ್ಟ್ ಕರ್ನಾಟಕ': ನಿರೀಕ್ಷೆಗೂ ಮೀರಿ 9.8 ಲಕ್ಷ ಕೋಟಿ ರೂ. ಹೂಡಿಕೆ



ಮೂರು ದಿನಗಳ 'ಇನ್ವೆಸ್ಟ್ ಕರ್ನಾಟಕ' ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಶುಕ್ರವಾರ ತೆರೆ ಬಿದ್ದಿದ್ದು, ಹೂಡಿಕೆ ಆಕರ್ಷಣೆಯಲ್ಲಿ ಸಾರ್ವಕಾಲಿಕ ದಾಖಲೆ ಬರೆದಿದೆ. ಈ ಮೂರು ದಿನಗಳಲ್ಲಿ ರಾಜ್ಯಕ್ಕೆ 9.8 ಲಕ್ಷ ಕೋಟಿ ಹೂಡಿಕೆ ಹರಿದು ಬಂದಿದೆ. ಸಮಾವೇಶದಲ್ಲಿ 5 ಲಕ್ಷ ಕೋಟಿ ರೂಪಾಯಿಗಳ ಹೂಡಿಕೆಯನ್ನು ನಿರೀಕ್ಷೆ ಮಾಡಲಾಗಿತ್ತು. ಆದರೆ ನಿರೀಕ್ಷೆಗಿಂತ ದುಪ್ಪಟ್ಟು ಹೂಡಿಕೆ ಹರಿದು ಬಂದಿದೆ. 9.8 ಲಕ್ಷ ಕೋಟಿ ರೂಪಾಯಿ ಮೊತ್ತದ ಬಂಡವಾಳ ಹೂಡಿಕೆ ಒಪ್ಪಂದ ಘೋಷಣೆಯಾಗಿದೆ. ನಮ್ಮ ನಿರೀಕ್ಷೆಗೂ ಮೀರಿ ಹೂಡಿಕೆ ಒಪ್ಪಂದಗಳು ನಡೆದಿದೆ. ಸರಕಾರ ಉದ್ಯಮಿಗಳ ನಿರೀಕ್ಷೆ ಹುಸಿಗೊಳಿಸುವುದಿಲ್ಲ. ಅವರು ಬಯಸುವ ಮೂಲ ಸೌಲಭ್ಯಗಳನ್ನು ಬದ್ಧತೆಯಿಂದಲೇ ಕಲ್ಪಿಸಲಿದೆ" ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದ್ದಾರೆ.

ಈ ಬಾರಿಯ ಹೂಡಿಕೆ ಒಪ್ಪಂದಗಳಲ್ಲಿ ಅತಿ ಹೆಚ್ಚು ಒಪ್ಪಂದ ಇಂಧನ ಕ್ಷೇತ್ರಗಳಲ್ಲಿ ಆಗಿದೆ. ಶೇಕಡ 70ರಷ್ಟು ಹೂಡಿಕೆಗಳು ಬೆಂಗಳೂರು ಬಿಟ್ಟು ರಾಜ್ಯದ ಇತರ ಪ್ರಮುಖ ನಗರಗಳಲ್ಲಿ ಆಗಲಿವೆ. ಹೀಗಾಗಿ ರಾಜ್ಯದ ಇತರ ನಗರಗಳಲ್ಲೂ ಕೈಗಾರಿಕಾ ಬೆಳವಣಿಗೆ ತ್ವರಿತಗತಿಯಲ್ಲಿ ಆಗಲಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.